# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.2089/2017/ಉನಿವಿ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 18.8.2017.

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ಮಂಡ್ಯ ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ ಗೋಮಾಳ ಜಮೀನುಗಳಲ್ಲಿ ಅಕ್ರಮವಾಗಿ ನಡೆಸುತ್ತಿರುವ ಕಲ್ಲುಮಡಿ ಘಟಕಗಳನ್ನು ಸ್ಥಗಿತಗೊಳಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಕುರಿತು.

*******

ಶ್ರೀ. ಕೇಶವಮೂರ್ತಿ ಎಂ.ಡಿ. ಮಲ್ಲಿಗೆರೆ ಗ್ರಾಮದ ನಿವಾಸಿ, ಮಂಡ್ಯ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) **ಶ್ರೀ ಕೆ.ಎಂ.ನಾಗಭೂಷಣ, ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಡ್ಯ, ಮತ್ತು** (2) ವಲಯ ಅರಣ್ಯಾಧಿಕಾರಿ, ಅರಣ್ಯ ಇಲಾಖೆ, ಮಂಡ್ಯ, (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ, ಮಂಡ್ಯ ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ ಗೋಮಾಳ ಜಮೀನುಗಳಲ್ಲಿ ಮತ್ತು ಕೆಲವು ಸರ್ವೆ ನಂಬರ್ ಜಮೀನುಗಳಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮತ್ತು ಕ್ರಷರ್‌ಗಳನ್ನು ನಡೆಸುತ್ತಿದ್ದಾರೆ. ಶ್ರೀರಂಗಪಟ್ಟಣ ತಾಲ್ಲೂಕಿನ ಚನ್ನಕೇರಿ ಗ್ರಾಮದ ಗೋಮಾಳ ಜಮೀನು ಸ.ನಂ.78ರಲ್ಲಿ ಎಲ್.ಜೆ.ರಾಮದೇವ್, ಕರಿಗೌಡ, ರಘು, ಹಾಗೂ ಇನ್ನೂ ಹಲವಾರು ಜನರು ಒತ್ತುವರಿ ಮಾಡಿ ಅನಧಿಕೃತವಾಗಿ ಲೈಸೆನ್ಸ್ ಅವಧಿ ಮುಗಿದಿದ್ದರೂ ಸಹ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿದ್ದಾರೆ. ಜೊತೆಗೆ ರಿಗರ್ ಬ್ಲಾಸ್ಟ್ ಕೂಡ ಮಾಡುತ್ತಿದ್ದಾರೆ. ಅದೇ ರೀತಿ ಹನುಮಂತು, ಗೋಪೀನಾಥ್, ಹೇಮಂತರೆಡ್ಡಿ, ಉಮೇಶ್, ಮಹದೇವು, ಸೋಮಣ್ಣ ಮತ್ತು ಪ್ರಭು

ಎನ್ನುವವರು ಅಕ್ರಮವಾಗಿ ಕ್ರಷರ್‌ಗಳನ್ನು ಅನುಮತಿ ಇಲ್ಲದೆ ಇಲ್ಲಿಯವರೆಗೂ ನಡೆಸುತ್ತಿದ್ದಾರೆ. ಮೇಲ್ಕಂಡ 2 ತಾಲ್ಲೂಕಿನ ವ್ಯಾಪ್ತಿಯಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದ್ದರೂ ಎದುರುದಾರರು ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮಕೈಗೊಂಡು ಸರ್ಕಾರಕ್ಕೆ ಆಗಿರುವ ನಷ್ಟವನ್ನು ಭರಿಸಬೇಕೆಂದು ಕೋರಿಕೊಂಡಿರುತ್ತಾರೆ.

3. ದೂರು ದಾಖಲಿಸಿದ ನಂತರ ಎದುರುದಾರರಿಂದ ಆಕ್ಷೇಪಣೆಗಳನ್ನು ಕೋರಲಾಯಿತು. ಆದರೆ ಎದುರುದಾರರು ಆಕ್ಷೇಪಣೆ ಸಲ್ಲಿಸಿರುವುದಿಲ್ಲ.

4. ದಿ.19.1.2018ರಂದು ಪಾಂಡವಪುರ ಕ್ಯಾಂಪಿನಲ್ಲಿ 1ನೇ ಎದುರುದಾರರು ಹಾಜರಾಗಿ ಅಕ್ರಮ ಗಣಿಗಾರಿಕೆ ಮಾಡುವವರ ಮೇಲೆ ದಂಡ ಹಾಕಿ ವರದಿ ಸಲ್ಲಿಸುವುದಾಗಿ ತಿಳಿಸಿದ್ದರು. ಅದರಂತೆ ದಿ.28.3.2018ರಂದು ವರದಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ತಮ್ಮ ವರದಿಯಲ್ಲಿ ಈಗಾಗಲೇ ದಿ.17.3.2015ರಂದು ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿರುವ 7 ವ್ಯಕ್ತಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ಮೊಕದ್ದಮೆ ಸಂ.128/2015 ಮತ್ತು ಮೊಕದ್ದಮೆ ಸಂ.129/2015 ಇವುಗಳನ್ನು ಶ್ರೀರಂಗಪಟ್ಟಣ ಪೋಲೀಸ್ ಠಾಣೆಯಲ್ಲಿ ದಾಖಲು ಮಾಡಿರುತ್ತಾರೆಂದು ಹಾಗೂ ಸದರಿ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗಾಗಿರುತ್ತವೆ. ದಿ.15.6.2017ರಂದು ಮೊಕದ್ದಮೆ ಸಂ.191/2017ರಲ್ಲಿ 4 ವ್ಯಕ್ತಿಗಳ ವಿರುದ್ಧ, ಮೊಕದ್ದಮೆ ಸಂ.123/17 ರಲ್ಲಿ 5 ವ್ಯಕ್ತಿಗಳ ವಿರುದ್ಧ, ಮೊಕದ್ದಮೆ ಸಂ.192/17 ರಲ್ಲಿ 4 ವ್ಯಕ್ತಿಗಳ ವಿರುದ್ಧ, ಶ್ರೀರಂಗಪಟ್ಟಣ ಪೋಲೀಸ್ ಠಾಣೆಯಲ್ಲಿ ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ದಾಸ್ತಾನು ಮಾಡಿದ್ದರಿಂದ ದಾಖಲು ಮಾಡಿರುತ್ತಾರೆ. ಎದುರುದಾರರು ಮುಂದುವರೆದು ಸದರಿ ಮಂಡ್ಯ ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳಲ್ಲಿ ಜಿಲ್ಲಾ ಟಾಸ್ಕ್ ಫೋರ್ಸ್ ನಿರ್ದೇಶನದಂತೆ ಆಗಾಗ ಜಂಟಿ ಕಾರ್ಯಾಚರಣೆ ನಡೆಸಿ ಅನಧಿಕೃತ ಕಲ್ಲು ಗಣಿಗಾರಿಕೆ ಮತ್ತು ಕಲ್ಲು ಪುಡಿ ಘಟಕ ಚಾಲನೆಯಾಗದಂತೆ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಸದರಿ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ಸ್ಥಗಿತಗೊಂಡಿರುತ್ತದೆಂದು ತಿಳಿಸಿರುತ್ತಾರೆ. ತಮ್ಮ ಆಕ್ಷೇಪಣೆಯ ಜೊತೆಗೆ ಮೇಲ್ಕಂಡ ಮೊಕದ್ದಮೆ ಸಂ. 128/15, 129/15, 191/17, 192/17, 123/17 ರ ಪ್ರಥಮ ವರ್ತಮಾನ ವರದಿಗಳ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

N. Ananda

5. ದೂರು, 1ನೇ ಎದುರುದಾರರ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ದೂರುದಾರರು ತಮ್ಮ ದೂರಿನಲ್ಲಿ ಮಂಡ್ಯ ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳಲ್ಲಿ ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ಮತ್ತು ಕಲ್ಲು ಪುಡಿ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಎದುರುದಾರರಿಗೆ ಈ ಬಗ್ಗೆ ದೂರು ನೀಡಿದರೂ ಕೂಡ ಎದುರುದಾರರು ಯಾವುದೇ ಕ್ರಮಕೈಗೊಳ್ಳುತ್ತಿಲ್ಲವೆಂದು ಆಪಾದಿಸಿದ್ದಾರೆ. 1ನೇ ಎದುರುದಾರರು ಹಾಜರುಪಡಿಸಿದ ಪ್ರಥಮ ವರ್ತಮಾನ ವರದಿ ಹಾಗೂ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ದಾಖಲಿಸಿದ ದೂರಿನ ಪ್ರತಿಗಳನ್ನು ಪರಿಶೀಲಿಸಿದಾಗ ಸದರಿ ದೂರುಗಳಲ್ಲಿ ಶ್ರೀರಂಗಪಟ್ಟಣ ತಾಲ್ಲೂಕಿನ ಸರಹದ್ದಿನ ಪ್ರದೇಶಗಳಲ್ಲಿ ಅನಧಿಕೃತವಾಗಿ ಕ್ರಷರ್ ಘಟಕವನ್ನು ಚಾಲನೆ ಮಾಡಿ ಪರಿಸರ ಮಾಲಿನ್ಯ ಹಾಗೂ ದೂಳಿನಿಂದ ಬೆಳೆಗಳು ನಷ್ಟವಾಗುತ್ತಿವೆಯೆಂದು ಸಾರ್ವಜನಿಕರಿಂದ ದೂರು ಬಂದ ಮೇರೆಗೆ ದಿ.14.6.2017ರಂದು ಕಂದಾಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಅನಧಿಕೃತ ಗಣಿಗಾರಿಕೆ ಮತ್ತು ಕಲ್ಲುಪುಡಿ ಘಟಕಗಳ ವಿರುದ್ಧ ಜಂಟಿ ಕಾರ್ಯಾಚರಣೆ ನಡೆಸಿ ಪರಿಶೀಲಿಸಿದಾಗ ಜಕ್ಕನಹಳ್ಳಿ ಗ್ರಾಮದ ಸ.ನ.83/ಪಿ15ರಲ್ಲಿ 2 ಎಕರೆ, 83/ಪಿ12ರಲ್ಲಿ 2 ಎಕರೆ ಪ್ರದೇಶದಲ್ಲಿ ಅನಧಿಕೃತವಾಗಿ ಕೃಷಿ ಭೂಮಿಯಲ್ಲಿ ಕಟ್ಟಡ ಕಲ್ಲುಗಣಿಗಾರಿಕೆ ಮಾಡುತ್ತಿರುವುದು ಕಂಡುಬಂದಿರುತ್ತದೆ. ಅದೇ ರೀತಿ ಚನ್ನಕೆರೆ ಗ್ರಾಮದ ಸ.ನಂ.10/1, 103/2, 102/1 ಇವುಗಳಲ್ಲಿ 1.20 ಎಕರೆ, 101/2, 102/2, 103/1 ಮತ್ತು 15ರಲ್ಲಿ 1 ಎಕರೆ 38 ಗುಂಟೆ, ಸ.ನಂ.117ರಲ್ಲಿ 2 ಎಕರೆ, ಸ.ನಂ.97ರಲ್ಲಿ 3 ಎಕರೆ ಪ್ರದೇಶದಲ್ಲಿ ಕ್ರಷರ್ ಘಟಕವನ್ನು ನಿರ್ಮಾಣಮಾಡಿಕೊಂಡು ಕಟ್ಟಡ ಕಲ್ಲನ್ನು ತಂದು ಪುಡಿ ಮಾಡಿ ದಾಸ್ತಾನಿಟ್ಟಿರುವುದು ಕಂಡುಬಂದಿರುತ್ತದೆ. ಅದೇ ರೀತಿ, ಗೌಡಹಳ್ಳಿ ಗ್ರಾಮದ ಸ.ನಂ.128 ಮತ್ತು 129ರಲ್ಲಿ ಕ್ರಷರ್ ಘಟಕವನ್ನು ನಿರ್ಮಾಣಮಾಡಿ ಜಲ್ಲಿ ಕಲ್ಲನ್ನು ತಯಾರಿಸಿ ದಾಸ್ತಾನಿಟ್ಟಿರುವುದು ಕಂಡುಬಂದಿದೆಯೆಂದು ತಿಳಿಸಿರುತ್ತಾರೆ.

6. 1ನೇ ಎದುರುದಾರರು ದಾಖಲು ಮಾಡಿದ ಮೇಲ್ಕಂಡ ದೂರುಗಳಲ್ಲಿ ಸಾರ್ವನಿಕರಿಂದ ಬಂದ ದೂರಿನ ಮೇರೆಗೆ ಕಾರ್ಯಾಚರಣೆ ಮಾಡಿ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಕಲ್ಲು ಘಟಕಗಳನ್ನು ನಡೆಸುತ್ತಿರುವುದನ್ನು ಶೋಧನೆ ಮಾಡಿ ಅವರ ವಿರುದ್ಧ ಶ್ರೀರಂಗಪಟ್ಟಣ ನ್ಯಾಯಾಲಯದಲ್ಲಿ ಎಂ.ಎಂ.ಆರ್.ಡಿ. ಮತ್ತು ಸೆಕ್ಷನ್ 379 ಐಪಿಸಿ ರಡಿ ಪ್ರಕರಣ

ದಾಖಲಿಸಿರುತ್ತಾರೆಂದು ತಿಳಿಸಿರುತ್ತಾರೆ. 1ನೇ ಎದುರುದಾರರು ಮಂಡ್ಯ ಜಿಲ್ಲೆಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಮುಖ್ಯಸ್ಥರಾಗಿದ್ದು ಮತ್ತು ಜವಾಬ್ದಾರಿ ಅಧಿಕಾರಿಯಾಗಿದ್ದು, ಸದರಿಯವರು ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ಗಣಿಗಾರಿಕೆ ಮತ್ತು ಕಲ್ಲು ಪುಡಿ ಘಟಕಗಳ ಸ್ಥಳಕ್ಕೆ ಆಗಾಗ ಹೋಗಿ ಲೈಸೆನ್ಸ್ ನೀಡಿದ ಪ್ರಕಾರ ಗಣಿಗಾರಿಕೆ ನಡೆಸುತ್ತಿದ್ದಾರೋ ಇಲ್ಲವೋ ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ. ಮೇಲ್ಕಂಡ ಕ್ರಿಮಿನಲ್ ಪ್ರಕರಣಗಳಲ್ಲಿ ತಿಳಿಸಿದ ಆರೋಪಿಗಳು ಅವರಿಗೆ ನೀಡಿದ ಲೈಸೆನ್ಸ್ ಅವಧಿ ಮುಗಿದ ನಂತರ ಅನಧಿಕೃತವಾಗಿ ಗಣಿಗಾರಿಕೆ ಮತ್ತು ಕಲ್ಲುಪುಡಿ ಘಟಕಗಳನ್ನು ನಡೆಸುತ್ತಿದ್ದಾರೆಂದು ತಿಳಿಸಿರುತ್ತಾರೆ. ಲೈಸೆನ್ಸ್ ಅವಧಿ ಮುಗಿದ ನಂತರ ಸದರಿ ಅಕ್ರಮ ಗಣಿಗಾರಿಕೆಗಳು ಮುಚ್ಚುವ ಬಗ್ಗೆ ಕ್ರಮಕೈಗೊಳ್ಳುವುದು 1ನೇ ಎದುರುದಾರರ ಕರ್ತವ್ಯವಾಗಿರುತ್ತದೆ. ಆದರೆ 1ನೇ ಎದುರುದಾರರು ಈ ಬಗ್ಗೆ ಯಾವುದೇ ಕ್ರಮಕೈಗೊಳ್ಳದೇ ಕಾಲಹರಣ ಮಾಡಿ ಅಧಿಕಾರ ದುರುಪಯೋಗ ಮಾಡಿ ತಮ್ಮ ಕರ್ತವ್ಯದಲ್ಲಿ ಬೇಜವಾಬ್ದಾರಿಯನ್ನು ತೋರಿಸಿರುತ್ತಾರೆ. 2017ರಲ್ಲಿ ದಾಖಲಿಸಿದ ಪ್ರಕರಣಗಳಲ್ಲಿ 1ನೇ ಎದುರುದಾರರು ಜಂಟಿ ಕಾರ್ಯಾಚರಣೆ ಮಾಡುವಾಗ ಸ್ಥಳಕ್ಕೆ ಹೋದಾಗ ಅಂದಾಜು 30–40 ಮೆ.ಟನ್ ಗಳಷ್ಟು ಕಟ್ಟಡ ಕಲ್ಲನ್ನು ಪುಡಿ ಮಾಡಿ ದಾಸ್ತಾನು ಮಾಡಿರುವುದು ಕಂಡುಬಂದಿರುತ್ತದೆಂದು ತಿಳಿಸಿರುತ್ತಾರೆ. 1ನೇ ಎದುರುದಾರರು ಆರೋಪಿಗಳ ವಿರುದ್ಧ ಕೇವಲ ಕ್ರಿಮಿನಲ್ ಪ್ರಕರಣಗಳನ್ನು ಮಾತ್ರ ದಾಖಲಿಸಿರುತ್ತಾರೆ. ಆದರೆ ದಾಸ್ತಾನು ಮಾಡಿದ ಕಲ್ಲು ಪುಡಿಗಳನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ತಿಳಿಸಿರುವುದಿಲ್ಲ. ಅದೇ ರೀತಿ ಮೇಲ್ಕಂಡ ಪ್ರಕರಣಗಳ ಆರೋಪಿಗಳ ವಿರುದ್ಧ ಅಕ್ರಮವಾಗಿ ಕಲ್ಲು ಪುಡಿ ಘಟಕವನ್ನು ನಡೆಸಿದ್ದಕ್ಕೆ ಕಾನೂನುಪ್ರಕಾರ ದಂಡ ವಿಧಿಸಿರುವುದಿಲ್ಲ. ದಿ.19.1.2018ರಂದು ಪಾಂಡವಪುರದಲ್ಲಿ ನಡೆದ ಕ್ಯಾಂಪಿನಲ್ಲಿ 1 ನೇ ಎದುರುದಾರರು ಆರೋಪಿತರ ವಿರುದ್ಧ ದಂಡ ವಿಧಿಸಿ ದಂಡ ವಸೂಲು ಮಾಡಿ ವರದಿ ಸಲ್ಲಿಸುವುದಾಗಿ ಹೇಳಿದ್ದರೂ, ಇದುವರೆಗೆ ಎಷ್ಟು ದಂಡದ ಹಣ ವಿಧಿಸಿದ್ದಾರೆ ಮತ್ತು ಒಟ್ಟು ಎಷ್ಟು ಹಣವನ್ನು ದಂಡವಾಗಿ ವಸೂಲಿ ಮಾಡಿದ್ದಾರೆಂದು ತಿಳಿಸಿರುವುದಿಲ್ಲ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಮಂಡ್ಯ ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ ಗೋಮಾಳ ಜಮೀನುಗಳಲ್ಲಿ

ಅಕ್ರಮವಾಗಿ ನಡೆಸುತ್ತಿರುವ ಕಲ್ಲುಮಡಿ ಘಟಕಗಳನ್ನು ಸ್ಥಗಿತಗೊಳಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಕೋರಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

N. Anand 20/8

**[ ನ್ಯಾಯಮೂರ್ತಿ ಎನ್.ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

18/8/18